ನಿವೇದನೆ

# ಬದುಕಿಗೆ ಕಾನೂನುಬದ್ಧ ಗೌರವದ ವಿದಾಯ ಸ್ವಾಗತಾರ್ಹ ಆದೇಶದ ಅನುಷ್ಠಾನವೇ ಸವಾಲು

**ಸದುದ್ದೇಶದ ಆದೇಶಗಳನ್ನು ಜಾರಿಪಡಿಸುವ ನಿಟ್ಟಿನಲ್ಲಿ ನಮ್ಮ ವ್ಯವಸ್ಥೆಯ ಜಡತೆ ಹಾಗೂ ಶೂನ್ಯಸಂವೇದನೆ ಲೋಕಪ್ರಸಿದ್ಧ. ಈ ನಿಷ್ಕ್ರಿಯತೆ ದಯಾಮರಣದ ಆಯ್ಕೆಯ ವಿಷಯದಲ್ಲೂ ಆಗದಂತೆ ಸಂಬಂಧಿಸಿದ ಇಲಾಖೆಗಳು ಹಾಗೂ ಅಧಿಕಾರಿಗಳು ಮಾನವೀಯ ನಡವಳಿಕೆಯನ್ನು ರೂಢಿಸಿಕೊಳ್ಳಬೇಕಾಗಿದೆ.**

ಬದುಕಬಹುದಾದ ಎಲ್ಲ ಭರವಸೆಗಳನ್ನು ಕಳೆದುಕೊಂಡವರು ತಮ್ಮ ಬದುಕನ್ನು ಕೊನೆಗೊಳಿಸಿಕೊಳ್ಳಬಹುದಾದ ಕಾನೂನುಬದ್ಧ ಸಾಧ್ಯತೆಯೊಂದನ್ನು ರಾಜ್ಯದ ಆರೋಗ್ಯ ಇಲಾಖೆ ಒದಗಿಸಿರುವುದು ಸ್ವಾಗತಾರ್ಹ. ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪನ್ನು ಜಾರಿಗೊಳಿಸುವ ಭಾಗವಾಗಿ, ಗುಣವಾಗದ ಹಾಗೂ ತೀವ್ರ ಯಾತನೆಯ ಕಾಯಿಲೆಗಳಿಗೆ ಒಳಗಾದ ರೋಗಿಗಳಿಗೆ ಘನತೆಯ ಸಾವು ಒದಗಿಸಿಕೊಡುವ ಆದೇಶವನ್ನು ಆರೋಗ್ಯ ಇಲಾಖೆ ಹೊರಡಿಸಿದೆ. ಗುಣಪಡಿಸಲಾಗದ ರೋಗವೊಂದು ರೋಗಿ ಹಾಗೂ ಆತನ ಕುಟುಂಬವನ್ನು ಎಂಥ ಅಸಹಾಯಕತೆಗೆ ದೂಡಬಲ್ಲದು ಎನ್ನುವುದನ್ನು ಅನುಭವದಿಂದ ಅರಿತವರಿಗೆ ಈ ಕಾನೂನು ಬಿಡುಗಡೆಯ ಬೆಳ್ಳಿಚುಕ್ಕಿಯಂತೆ ಕಾಣಿಸುತ್ತದೆ. ರೋಗಿಯ ಹಕ್ಕುಗಳನ್ನು ರಕ್ಷಿಸುವ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಘನತೆಯ ಸಾವನ್ನು ಆರಿಸಿಕೊಳ್ಳಬಹುದಾದ ಸ್ವಾತಂತ್ರ್ಯ ಮಾನವೀಯವಾದುದು ಹಾಗೂ ನಾಗರಿಕ ಸಮಾಜದ ಪ್ರಬುದ್ಧತೆಯನ್ನು ಸೂಚಿಸುವಂತಹದ್ದು.

ದಯಾಮರಣದ ಕುರಿತ ಜಾಗತಿಕ ಚರ್ಚೆ ದೀರ್ಘ ಕಾಲದಿಂದ ನಡೆಯುತ್ತಿದ್ದರೂ, ಈವರೆಗೂ ಬೆರಳೆಣಿಕೆ ದೇಶಗಳಷ್ಟೇ ದಯಾಮರಣವನ್ನು ಒಪ್ಪಿಕೊಂಡಿವೆ. ಕೆನಡಾ, ಕೊಲಂಬಿಯಾ, ಈಕ್ವೆಡಾರ್, ಲಕ್ಸಂಬರ್ಗ್, ನೆದರ್ಲೆಂಡ್ಸ್, ನ್ಯೂಜಿಲೆಂಡ್‌ನಂತಹ ಕೆಲವು ದೇಶಗಳಷ್ಟೇ ದಯಾಮರಣವನ್ನು ಕಾನೂನುಬದ್ಧಗೊಳಿಸಿವೆ. ದಯಾಮರಣ ಕುರಿತಾದ ಗಂಭೀರ ಚರ್ಚೆ ಭಾರತದಲ್ಲಿ ಕಳೆದ ಒಂದೂವರೆ ದಶಕದಿಂದಲೂ ನಡೆಯುತ್ತಿದೆ. 2011ರ ಅರುಣಾ ರಾಮಚಂದ್ರ ಶಾನುಭೋಗ್ ಪ್ರಕರಣದಲ್ಲಿ, ಜೀವರಕ್ಷಕ ಯಂತ್ರಗಳ ಬಳಕೆ ನಿಲ್ಲಿಸುವ, ಚಿಕಿತ್ಸೆ ಮುಂದುವರಿಸದಿರುವ ಮೂಲಕ ಗೌರವದ ಸಾವನ್ನು ಒದಗಿಸುವ ನಿಷ್ಕ್ರಿಯ (ಪರೋಕ್ಷ) ದಯಾಮರಣದ ಅವಕಾಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು, ಘನತೆಯ ಸಾವಿನ ಆಯ್ಕೆಯನ್ನು ಕಾನೂನುಬದ್ಧಗೊಳಿಸಿತು. 2018ರಲ್ಲಿ ಗೌರವದ ಸಾವಿನ ಆಯ್ಕೆಯನ್ನು ಮತ್ತಷ್ಟು ಸ್ಪಷ್ಟವಾಗಿ ಹೇಳುವುದರ ಜೊತೆಗೆ, ಪರೋಕ್ಷ ದಯಾಮರಣದ ಮಾರ್ಗಸೂಚಿ ಸೂತ್ರಗಳನ್ನೂ ರೂಪಿಸಿತು. ಸಾವಿಗೆ ಕಾರಣವಾಗುವ ರಾಸಾಯನಿಕಗಳ ಚುಚ್ಚುಮದ್ದು ನೀಡುವ ಸಕ್ರಿಯ ದಯಾಮರಣಕ್ಕೆ ಭಾರತದಲ್ಲಿ ಸದ್ಯಕ್ಕೆ ಅವಕಾಶ ಇಲ್ಲ.

ದಯಾಮರಣವನ್ನು ಸುಪ್ರೀಂ ಕೋರ್ಟ್ ಕಾನೂನುಬದ್ಧಗೊಳಿಸಿದ್ದರೂ, ಅದರ ಅನುಷ್ಠಾನ ಸುಲಭವಲ್ಲ. ಗೌರವಪೂರ್ಣ ಸಾವನ್ನು ಕಲ್ಪಿಸುವ ಅವಕಾಶ ದುರುಪಯೋಗ ಆಗದಂತೆ ತಡೆಯುವ ನಿಟ್ಟಿನಲ್ಲಿ ಕಾನೂನು ಹಾಗೂ ಆರೋಗ್ಯ ಇಲಾಖೆಯ ಮೇಲೆ ಮಹತ್ವದ ಹೊಣೆಗಾರಿಕೆಯಿದೆ. ಈ ನೈತಿಕ ಉತ್ತರದಾಯಿತ್ವವನ್ನು ಆದೇಶದಲ್ಲಿನ ವಿವಿಧ ಸಂಗತಿಗಳು ಹೆಚ್ಚಿಸುವಂತಿವೆ. ಮಾರಣಾಂತಿಕ ಕಾಯಿಲೆಯಿಂದಾಗಿ ಜೀವಚ್ಛವದಂತೆ ಬದುಕಬೇಕಾದ ಸ್ಥಿತಿ ತಲುಪಿದ ಸಂದರ್ಭದಲ್ಲಿ ತನಗೆ ಜೀವರಕ್ಷಕ ಉಪಕರಣಗಳನ್ನು ಅಳವಡಿಸಬಾರದೆಂದು ವ್ಯಕ್ತಿಯೊಬ್ಬ ಉಯಿಲು ಬರೆಯುವ ಅವಕಾಶವನ್ನು ಆದೇಶ ಕಲ್ಪಿಸಿದೆ. ಉಯಿಲು ಬರೆಯದ ಸಂದರ್ಭಗಳಲ್ಲಿ– ರೋಗಿ ಕೋಮಾಕ್ಕೆ ತೆರಳಿ ಚೇತರಿಸಿಕೊಳ್ಳಲು ಸಾಧ್ಯತೆಯಿಲ್ಲದ ಸಂದರ್ಭದಲ್ಲಿ– ರೋಗಿಯ ಪರವಾಗಿ ಕುಟುಂಬದ ಸದಸ್ಯರು ದಯಾಮರಣಕ್ಕಾಗಿ ಕಾನೂನು ಸಮ್ಮತಿ ಪಡೆಯಲು ಪ್ರಯತ್ನಿಸಬಹುದಾಗಿದೆ. ದಯಾಮರಣ ಪಡೆಯಲಿಕ್ಕೆ ಹಲವು ಹಂತಗಳ ಅನುಮತಿಯನ್ನು ಹಾಗೂ ನ್ಯಾಯಾಂಗದ ಮೇಲ್ವಿಚಾರಣೆಯನ್ನು ಆದೇಶದಲ್ಲಿನ ಸುರಕ್ಷತಾ ಕ್ರಮಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಆದೇಶವೊಂದು ಎಷ್ಟೇ ಮಾನವೀಯವಾಗಿದ್ದರೂ ಅದು ಅನುಷ್ಠಾನಕ್ಕೆ ಬರುವಲ್ಲಿ ಸಾರ್ವಜನಿಕರ ಜವಾಬ್ದಾರಿಯುತ ಸಹಭಾಗಿತ್ವ ಅಗತ್ಯ. ಸದುದ್ದೇಶದ ಆದೇಶಗಳನ್ನು ಜಾರಿಪಡಿಸುವ ನಿಟ್ಟಿನಲ್ಲಿ ನಮ್ಮ ವ್ಯವಸ್ಥೆಯ ಜಡತೆ ಹಾಗೂ ಶೂನ್ಯಸಂವೇದನೆ ಲೋಕಪ್ರಸಿದ್ಧವಾದುದು. ಈ ನಿಷ್ಕ್ರಿಯತೆ ದಯಾಮರಣದ ಆಯ್ಕೆಯ ವಿಷಯದಲ್ಲೂ ಆಗದಂತೆ ಸಂಬಂಧಿಸಿದ ಇಲಾಖೆಗಳು ಹಾಗೂ ಅಧಿಕಾರಿಗಳು ಮಾನವೀಯ ನಡವಳಿಕೆಯನ್ನು ರೂಢಿಸಿಕೊಳ್ಳಬೇಕಾಗಿದೆ. ಗೌರವದ ಸಾವನ್ನು ಪಡೆಯುವ ಅವಕಾಶದಲ್ಲಿ ಉಂಟಾಗಬಹುದಾದ ಅಡಚಣೆಗಳು ಅಥವಾ ವಿಳಂಬ ಧೋರಣೆ ರೋಗದ ಯಾತನೆಗಿಂತಲೂ ಹೆಚ್ಚಿನ ನೋವನ್ನು ರೋಗಿಗಳಿಗೆ ಉಂಟು ಮಾಡಬಹುದೆನ್ನುವ ಸೂಕ್ಷ್ಮವನ್ನು ಸಂಬಂಧಿಸಿದವರು ಮರೆಯಬಾರದು. ರೋಗಿಯ ಸ್ವಾತಂತ್ರ್ಯ ಮತ್ತು ವೈದ್ಯಕೀಯ ಕ್ಷೇತ್ರದ ನೈತಿಕತೆಗೆ ಧಕ್ಕೆಯಾಗದಂತೆ ಆದೇಶವನ್ನು ಜಾರಿಗೊಳಿಸಬೇಕಾದ ಸವಾಲನ್ನು ವೈದ್ಯಕೀಯ ಸಿಬ್ಬಂದಿ ಹಾಗೂ ಕಾನೂನು ಇಲಾಖೆ ಎಚ್ಚರದಿಂದ ಎದುರಿಸಬೇಕಾಗಿದೆ.

ದಯಾಮರಣದ ಬಗ್ಗೆ ವಿಶ್ವದಲ್ಲಿ ಭಿನ್ನ ಅಭಿಪ್ರಾಯಗಳಿವೆ. ಸಾವಿನ ಆಯ್ಕೆ ಅಧಾರ್ಮಿಕ ಹಾಗೂ ಪ್ರಕೃತಿಗೆ ವಿರುದ್ಧ ಎಂದು ನಂಬಿರುವವರೂ ಇದ್ದಾರೆ. ದುರುಪಯೋಗಕ್ಕೆ ಎಡೆ ಮಾಡಿಕೊಡಬಹುದು ಎನ್ನುವ ಆತಂಕ ದಯಾಮರಣವನ್ನು ವಿರೋಧಿಸಲು ಪ್ರಮುಖ ಕಾರಣಗಳಲ್ಲೊಂದಾಗಿದೆ. ಆದರೆ, ಕಾನೂನಿನ ದುರುಪಯೋಗದ ಆತಂಕ, ಬದುಕಿನ ಕುರಿತಾದ ಎಲ್ಲ ಭರವಸೆಗಳನ್ನು ಕಳೆದುಕೊಂಡ ರೋಗಿಗಳ ಸಾವಿನ ಆಯ್ಕೆಯನ್ನು ನಿರಾಕರಿಸಲು ಕಾರಣವಾಗಬಾರದು. ದಯಾಮರಣಕ್ಕೆ ಅವಕಾಶ ಕಲ್ಪಿಸುವ ಕಾನೂನನ್ನು ಬಲಪಡಿಸುವ ಮೂಲಕ ದುರುಪಯೋಗದ ಸಾಧ್ಯತೆಗಳನ್ನು ಕನಿಷ್ಠಗೊಳಿಸುವುದು ಮಾನವೀಯ ಸಮಾಜ ನಿರ್ವಹಿಸಬೇಕಾದ ಹೊಣೆಗಾರಿಕೆಯಾಗಿದೆ.

■ **ರಘುನಾಥ ಚ.ಹ.**



ಈಶ್ವರ್